ಪಡಸಾಲೆ ನಿಶ್ಶಬ್ದವಾಗಿತ್ತು. ಕೊಂಚ ಆತುರದಿಂದಲೇ ಬಾಗಿಲನ್ನು ತೆರೆದು ಒಳಗೆ ಹೋದೆ.

ಒಳಗೆ ಸರಿಯುತ್ತಿದ್ದಂತೆಯೇ ಬಾಗಿಲನ್ನು ಭದ್ರಪಡಿಸಿ ಮೇಣದ ಬತ್ತಿಯನ್ನು ಎತ್ತಿ ಹಿಡಿದು ಸುತ್ತಾ ಕಣ್ಣಾಡಿಸಿದೆ. ನಾನು ಲೊರೇಯ್ನ್ ದುರ್ಗದರಮನೆಯ ಪ್ರಖ್ಯಾತ ಕೆಂಪು ಕೋಣೆಯನ್ನು ಪ್ರವೇಶಿಸಿದ್ದೆ. ಇದೇ ಕೋಣೆಯೊಳಗೆ, ಅಥವಾ ನಾನು ಹತ್ತಿ ಬಂದಿದ್ದ ಮೆಟ್ಟಿಲುಗಳ ಮೇಲೆ ತಲೆ ಕೆಳಗಾಗಿ ಯುವ ಡ್ಯೂಕ್ ಸತ್ತು ಬಿದ್ದಿದ್ದ. 'ದೆವ್ವದ ಕೋಣೆ' ಎಂಬ ಕಳಂಕವನ್ನು ಕೊನೆಗಾಣಿಸಲು ಬಂದಿದ್ದ ಯುವ ಡ್ಯೂಕ್ ಕೆಂಪು ಕೋಣೆಯ ಮೆಟ್ಟಿಲುಗಳ ಮೇಲೆ ದಾರುಣ ರೀತಿಯಲ್ಲಿ ಬಿದ್ದು ಪ್ರಾಣ ತೆತ್ತಿದ್ದ. ಕೆಂಪು ಕೋಣೆಯ ದೆವ್ವಗಳನ್ನು ಜಯಿಸಲು ಬಂದು ಈ ರೀತಿ ಅಂತ್ಯ ಕಂಡಿದ್ದ. ಇದೇ ರೀತಿ ಈ ಕೆಂಪು ಕೋಣೆಯ ಕುರಿತಾಗಿ ಬಹಳಷ್ಟು ಕತೆಗಳು ಪ್ರಚಲಿತವಿದ್ದವು. ಆ ಅಪಘಾತವಾದ ಆ ಕೋಣೆಯ ಕಿಟಕಿಗಳಿಗೆ ನೇತುಹಾಕಿದ್ದ ಕಡುಕೆಂಪು ಬಣ್ಣದ ಪರದೆಗಳು, ಪುರಾತನ ಭಾರಿ ಪೀಠೋಪಕರಣಗಳು, ಬೆಳಕು ತಲುಪದ ಮೂಲೆಗಳು ಪ್ರೇತಾತ್ಮಗಳ ಇರುವನ್ನು ಸಾರುತ್ತಿದ್ದವು. ನನ್ನ ಪುಟಗೋಸಿ ಮೇಣದ ಬತ್ತಿಯ ಕ್ಷೀಣ ಹಳದಿ ಜ್ವಾಲೆ ಆ ಅಗಾಧ ಕೆಂಪು ಕೋಣೆಗೆ ಮತ್ತಷ್ಟು ನಿಗೂಢತೆಯನ್ನು ತುಂಬಿಸಲಷ್ಟೇ ಶಕ್ತವಾಗಿತ್ತು.

ದುರ್ಗದರಮನೆಯ ಈ ಕೆಂಪು ಕೋಣೆಯ ಪುರಾತನತೆ ಹಾಗೂ ನಿಗೂಢತೆ ನನ್ನನ್ನು ಕಸಿವಿಸಿಗೊಳಿಸಲಾರಂಭಿಸಿತು. ಅದು ನನ್ನನ್ನು ಸಂಪೂರ್ಣವಾಗಿ ಮಂಕಾಗಿಸುವ ಮೊದಲೇ ಈ ಕೋಣೆಯ ಪ್ರತಿ ಇಂಚಿಂಚೂ ಜಾಗವನ್ನು ಪರಾಮರ್ಶಿಸಿ ನೋಡಬೇಕೆಂದು ನಿಶ್ಚಯಿಸಿಕೊಂಡೆ. ಬಾಗಿಲು ಮುಚ್ಚಿರುವುದನ್ನು ಮತ್ತೊಮ್ಮೆ ಖಾತ್ರಿಪಡಿಸಿಕೊಂಡು ನನ್ನ ಶೋಧನೆಯನ್ನು ಆರಂಭಿಸಿದೆ. ಅಲ್ಲಿರುವ ಪೀಠೋಪಕರಣಗಳಿಂದ ಮೊದಲುಗೊಂಡು ಪ್ರತಿಯೊಂದು ಮೂಲೆ ಹಾಗೂ ಕಿಟಕಿಯ ಪರದೆಗಳನ್ನು ಸರಿಸಿ ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿದೆ. ಕೆಲವೊಮ್ಮೆ ನನ್ನ ಕಾಲ ಸಪ್ಪಳವೇ ನನ್ನನ್ನು ಬೆದರಿಸಿತು. ಎಲ್ಲಾ ಮುಗಿಸಿ ನನ್ನ ದೃಷ್ಟಿ ಗೋಡೆಗೆ ಅಂಟಿಸಿದ್ದ ದೇವದಾರು ಮರದ ಹಲಗೆ ಪಟ್ಟಿಗಳ ಕಡೆಗೆ ತಿರುಗಿತು. ಪುರಾತನ ಮನೆಗಳ ಗೋಡೆಗಳೊಳಗೆ ಗುಪ್ತ ದ್ವಾರಗಳಿತ್ಯಾದಿ ಇರುವುದೇನೂ ಅಚ್ಚರಿಯ

